**OS No: 65/2019**
**DW : 1**

(ಇಂದು ದಿನಾಂಕಃ **26-10-2023** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. ಎಸ್ ಆರ್ ಹೆಚ್ ವಕೀಲರಿಂದ:**

ದಾವಾ 3 ನೇ ಸ್ವತ್ತು ನನ್ನ ತಂದೆಯವರಿಗೆ ಬಸವರಾಜ ಹಂಚಿನಾಳ ಅವರ ಮೂಲಕ ವಿಲ್ ನಾಮೆ ಮೂಲಕ ಬಂತು ಎಂದರೆ ಸರಿ. ನನ್ನ ತಂದೆಯವರು ಸದರಿ ಸ್ವತ್ತನ್ನು ಹಚ್ಚಲು ಯಾವುದೇ ನೊಂದಾಯಿತ ಕಾಗದ ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿ. ನಾನು ನಂನ್ನ ತಂದೆಗೆ ತಿಳಿಯದಂತೆ ಒಂದು ವರದಿ ಸೃಷ್ಠಿ ಮಾಡಿ ನನ್ನ ಹೆಸರನ್ನು ಸದರಿ ಸ್ವತ್ತಿಗೆ ಹಚ್ಚಿಕೊಂಡಿದ್ದೇನೆ ಎಂದರೆ ಸುಳ್ಳು. ಒ ಎಸ್ ನಂ.158/2011 ರ ನನ್ನ ತಂದೆಯ ಸಹೋದರಿಯರು ದಾವೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ನಂತರ ನನಗೆ ಆ ದಾವೆ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಸರ್ವೆ ನಂ.41 ರ ರೇವಿನ್ಯೂ ದಾಖಲೆಯಲ್ಲಿ ನನ್ನ ತಂದೆ ಮತ್ತು ಚವರಡ್ಡಿಯವರ ಹೆಸರು ಹೇಗೆ ಹಚ್ಚಲಾಗಿತ್ತು ಎಂದು ಗೊತ್ತಿಲ್ಲ. ಸಾಕ್ಷಿದಾರ ಬಸಪ್ಪ ಹಂಚಿನಾಳ ಅವರ ವಿಲ್ ನಾಮೆ ಮೂಲಕ ಸರ್ವೆ ನಂ.41 ರ ಸ್ವತ್ತು ನನ್ನ ತಂದೆ ಚವರಡ್ಡಿಯವರಿಗೆ ಬಂದಿತ್ತು ಎನ್ನುತ್ತಾರೆ. ನನಗೆ ಈಗ 60 ವರ್ಷ. ನನ್ನ ತಂದೆಗೆ 2011 ರಲ್ಲಿ ಸುಮಾರು 70 ವರ್ಷ ಆಗಿರಬಹುದು. ಒ ಎಸ್ ನಂ.158/2011 ರಲ್ಲಿ ರಾಜೀ ಡಿಕ್ರಿ ಆಗುವ ಕಾಲಕ್ಕೆ ನನ್ನ ತಂದೆ ಮತ್ತು ಚಿಕ್ಕಪ್ಪ ಅಲ್ಪವಯಿ ಇದ್ದರು ಎಂದು ನಾನು ಪ್ರತಿವಾದ ಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸುಳ್ಳು. ಒ ಎಸ್ ನಂ.53/2020 ರ ದಾವೆ ಇನ್ನು ಚಾಲ್ತಿಯಲ್ಲಿದೆ. ಒ ಎಸ್ ನಂ.53/2020 ರ ದಾವೆ ಇದೇ ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ ಎಂದರೆ ಸುಳ್ಳು.

2. ಸರ್ವೆ ನಂ.41 ರಲ್ಲಿ ನಾನು 5 ಎಕರೆ ಚಿಲ್ಲರೆ ಎಕರೆಯಲ್ಲಿ ಕಬ್ಜಾ ಇದ್ದೇನೆ. ಸರ್ವೆ ನಂ.41 ರ ಉಳಿಕೆ ಜಮೀನಿನಲ್ಲಿ ನನ್ನ ತಂದೆಯ ಸಹೋದರಿಯರು ರಾಜೀ ಡಿಕ್ರಿಯ ಪ್ರಕಾರ ಕಬ್ಜೆ ಇದ್ದಾರೆ ಎಂದರೆ ನನ್ನ ದೊಡ್ಡಪ್ಪನವರು ಕಬ್ಜಾ ಇದ್ದಾರೆ ಎನ್ನುತ್ತಾರೆ . ಆ ರೀತಿ ನನ್ನ ತಕರಾರಿನಲ್ಲಿ ಬರೆಸಿದ್ದೇನೆ.

3. ದಾವಾ 2 ನೇ ಸ್ವತ್ತಿನ 5 ಎಕರೇ 22 ಗುಂಟೆ ಬಗ್ಗೆ ನನಗೆ ನನ್ನ ತಂದೆಯವರು ಯಾವುದೇ ಕಾಗದ ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿ. ದಾವಾ 3 ನೇ ಸ್ವತ್ತಿನ ಮೇಲೆ 2013 ರಲ್ಲಿ ನನ್ನ ತಂದೆ ಮತ್ತು ನಾನು ಸಾಲ ಮಾಡಿದ್ದೆವು . ಸದರಿ ಜಮೀನಿನಲ್ಲಿ ನಾನೇನು ಬೊರವೆಲ್ ಹಾಕಿಸಿಲ್ಲ. ಆದರೇ ಸದರಿ ಸಾಲವನ್ನು ನನ್ನ ತಂದೆ ತಾಯಿಯ ಆಸ್ಪತ್ರೆ ಖರ್ಚಿಗೆ ಬಳಸಿದ್ದೇನೆ. ಆ ಬಗ್ಗೆ ದಾಖಲೆಗಳು ಮನೆಯಲ್ಲಿವೆ . ಆ ಬಗ್ಗೆ ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ. ನನ್ನ ತಂದೆ ತಾಯಿಗೆ ಯಾವ ವರ್ಷದಲ್ಲಿ ಆಪರೇಶನ್ ಆಯಿತು ಎಂದು ಗೊತ್ತಿಲ್ಲ. ಸದರಿ ಸಾಲದ ಹಣವನ್ನು ಅಕ್ಕ ತಂಗಿಯರಿಗೆನೂ ಕೊಟ್ಟಿರುವುದಿಲ್ಲ . ನನ್ನ ಕುಟುಂಬದ ಒಳಿತಿಗಾಗಿ ಸಾಲ ಮಾಡಿದ್ದು ಇರುತ್ತದೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ

ಬರೆಸಿದ್ದು ಇರುತ್ತದೆ ಎಂದರೆ ಸರಿ. ನಾನು ಸಾಲವನ್ನು ಕುಟುಂಬದ ಒಳಿತಿಗಾಗಿ ಬಳಸಿಯೆ ಇಲ್ಲ ಎಂದರೆ ಸರಿಯಲ್ಲ.

4. ನನ್ನ ತಂದೆಗೆ ಜಮೀನಿನ ಉತ್ಪನ್ನ ಬಿಟ್ಟು ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ಇಟಗಿ ಗ್ರಾಮದ ಸ್ವತ್ತನ್ನು ಸಹ ಜಮೀನಿನ ಆದಾಯದಿಂದಲೇ ಖರೀದಿ ಮಾಡಲಾಗಿದೆ ಎಂದರೆ ಸರಿ. ವಾರಸಾ ಪ್ರಕಾರ ಆಸ್ತಿಗಳ ದಾಖಲೆಯಲ್ಲಿ ಎಲ್ಲರ ಹೆಸರು ಹಚ್ಚಲಾಗಿದೆ ಎಂದರೆ ಸರಿ. ಸಾಕ್ಷಿದಾರ ದಾವಾ 3 ನೇ ಸ್ವತ್ತು ನನ್ನ ಹೆಸರಿನಲ್ಲಿದೆ ಎನ್ನುತ್ತಾರೆ. ಉದ್ದೇಶಪೂರ್ವಕವಾಗಿ ದಾವಾ 3 ನೇ ಸ್ವತ್ತನ್ನು ನನ್ನ ಒಬ್ಬನೇ ಹೆಸರಿನಲ್ಲಿ ಹಚ್ಚಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿ ಮತ್ತು ಪ್ರತಿವಾದಿ 2 ರಿಂದ 4 ನೇಯವರಿಗೆ ಹಿಸ್ಸೆ ಕೊಡಬಾರದೆಂದು ನನ್ನ ಒಬ್ಬನ ಹೆಸರನ್ನು ಹಚ್ಚಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನನ್ನ ತಂದೆಯವರು 1978 ರಲ್ಲಿ ದಾವಾ 3 ನೇ ಸ್ವತ್ತನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ . ವ್ಹಿಪಿಸಿ ನಂ.299 ಸೈಟನ್ನು ನನ್ನ ತಂದೆಯವರು ಖರೀದಿಸಿದ್ದರು . ನನ್ನ ಸಹೋದರಿಯವರು ಸದರಿ ಸ್ವತ್ತನ್ನು ನನಗೆ ಬಿಟ್ಟುಕೊಟ್ಟಿರುತ್ತಾರೆ . ಹಕ್ಕುಬಿಟ್ಟು ಕೊಟ್ಟ ಕಾಗದ ನೊಂದಣಿ ಮಾಡಿಸಿಲ್ಲ. ವ್ಹಿಪಿಸಿ ನಂ.31 ರ ಮನೆಯಲ್ಲಿ ನಾನು ಮತ್ತು ಸಹೋದರಿಯರು ಇರುತ್ತೇವೆ. ಪದ್ಮಾವತಿ ಮತ್ತು ಇಂದ್ರವ್ವ ಮತ್ತು ಸುನಂದಾ ಮತ್ತು ಶಿವಲೀಲಾ ನನಗೆ ಯಾವುದೇ ಹಕ್ಕುಬಿಟ್ಟುಕೊಟ್ಟ ಪತ್ರ ಮಾಡಿಲ್ಲ ಎಂದರೆ ಸರಿಯಲ್ಲ . ನಿ.ಡಿ.1 ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಸಹೋದರಿಯರಿಗೆ 01 ವಾರ ಮೊದಲೇ ತಿಳಿಸಿಯೇ ನಿ.ಡಿ.1 ಮಾಡಿರುತ್ತೇನೆ. ನಿ.ಡಿ.1 ನ್ನು ನೊಂದಣಿ ಮಾಡಿಸಲು ತೊಂದರೇ ಎನು ಇರಲಿಲ್ಲ . ನಾನು ನನ್ನ ತಂದೆ ತೀರಿ ಹೋದ ಮೇಲೆ ವಾರಸಾ ಹಚ್ಚಬೇಕು ಎಂದು ಸುಳ್ಳು ಹೇಳಿ ನನ್ನ ಸಹೋದರಿಯರ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ . ನಾನು ನನ್ನ ಸಹೋದರಿಯರಿಗೆ ಹಿಸ್ಸೆ ಕೊಡಬಾರದೆಂದು ಕಿರುಕುಳ ಅರ್ಜಿ 4/2022 ನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನ್ನ ಸಹೋದರಿಯರಿಗೆ ಹಿಸ್ಸೆ ಇದೆ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ .

ಸಹಿ/-
ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ
ನವಲಗುಂದ.